ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ನೃಪತುಂಗ ರಸ್ತೆ ಬೆಂಗಳೂರು–1**

ಸಂಖ್ಯೆ ತ(1) ಅಧಿ.ಸ.ತ.ಕೈ.ಬ 09/2020–21 ದಿನಾಂಕ 26–02–2021

:ಜ್ಞಾಪನಾ:

ವಿಷಯ: ಕರ್ನಾಟಕ ವಿಧಾನಸಭೆ ಮತ್ತು ವಿಧಾನ ಪರಿಷತ್ತು ಅಧಿವೇಶನ ನಡೆಯುವಾಗ ತಪಾಸಣೆ ಕೈಗೊಳ್ಳುವ ಬಗ್ಗೆ,

ಉಲ್ಲೇಖ: ಕಛೇರಿ ಪತ್ರದ ಸಂಖ್ಯೆ: ತ(1)ತ.ಪ.ಮಾ/ಕ.ತ.ಹ 09/2020–21 ದಿನಾಂಕ: 22.09.2020.

********

2020–21 ನೇ ಸಾಲಿನಲ್ಲಿ ಹಂಚಿಕೆ ಮಾಡಲಾದ 2019–20 ನೇ ಸಾಲಿನ ಅವಧಿಯ (01–04–2019 ರಿಂದ 31.03.2020) ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗದ ವ್ಯಾಪ್ತಿಗೆ ಬರುವ ಎಲ್ಲಾ ಅಧೀನ ಕಛೇರಿಗಳಿಗೆ ಕಾರ್ಯ ವಿಧಾನ ಹಾಗೂ ಕಛೇರಿ ಕೆಲಸ ಚುರುಕುಗೊಳಿಸಲು ತಪಾಸಣೆ ಮತ್ತು ಮೇಲುಸ್ತುವಾರಿ ಹಾಗೂ ಮಾರ್ಗದರ್ಶನ ನೀಡಲು ಉಲ್ಲೇಖಿತ ಪತ್ರದಲ್ಲಿ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು/ಸಿಬ್ಬಂದಿ ವರ್ಗದವರ ತಂಡ ರಚನೆ ಮಾಡಲಾಗಿತ್ತು, ಅದರಂತೆ ತಪಾಸಣೆ ಕಾರ್ಯ ಕೈಗೊಂಡಿರುವುದು ಸರಿಯಷ್ಟೆ ಆದರೆ ದಿನಾಂಕ: 04.03.2021 ರಿಂದ 31.03.2021 ರವರೆಗೆ ಕರ್ನಾಟಕ ವಿಧಾನಸಭೆ ಮತ್ತು ಪರಿಷತ್ತು ಅಧಿವೇಶನ ನಡೆಯಲ್ಲಿದ್ದು, ಈ ಅವಧಿಯಲ್ಲಿ ಮಾನ್ಯ ಆಯುಕ್ತರ ಆದೇಶದಂತೆ ತಪಾಸಣೆಯನ್ನು ಕೈಗೊಳ್ಳದಿರಲು ತಿಳಿಸಿದೆ, 2020–21 ನೇ ಸಾಲಿನ ಈಗಾಗಲೇ ಹಂಚಿಕೆ ಮಾಡಲಾದ ಎಲ್ಲಾ ಕಛೇರಿಗಳ ತಪಾಸಣೆಯನ್ನು ಮಾರ್ಚ್–2021 ಬದಲಾಗಿ ಏಪ್ರಿಲ್–2021 ರ ಅಂತ್ಯಕ್ಕೆ ತಪ್ಪದೇ ಮುಕ್ತಾಯಗೊಳಿಸಿ ವರದಿಗಳನ್ನು ಸಹಾಯಕ ನಿರ್ದೇಶಕರು, ತಪಾಸಣೆ ಶಾಖೆ ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ ಕಳುಹಿಸಲು ಕೋರಿದೆ,

(ಮಾನ್ಯ ಆಯುಕ್ತರ ಆದೇಶದ ಮೇರೆಗೆ)

01·03·21

ಸಹ ನಿರ್ದೇಶಕರು (ಶಾಲಾ ಶಿಕ್ಷಣ)

ಇವರಿಗೆ

1. ನಿರ್ದೇಶಕರು ಸರ್ವಶಿಕ್ಷಣ ಅಭಿಯಾನ/ಪ್ರಾಥಮಿಕ/ಪ್ರೌಢ/ಅಲ್ಪಸಂಖ್ಯಾತ ನಿರ್ದೇಶನಾಲಯ/ಡಿ.ಎಸ್.ಇ.ಆರ್ ಟಿ, ಕ.ಪ್ರೌ.ಶಿ.ಪ.ಮಂ (ಪರೀಕ್ಷೆಗಳು) /ಇತರೆ (ಪರೀಕ್ಷೆಗಳು), ಕರ್ನಾಟಕ ಪಠ್ಯ ಪುಸ್ತಕ ಸಂಘ ಬೆಂಗಳೂರು,
2. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಸಹ ನಿರ್ದೇಶಕರು (ವಿಭಾಗೀಯ ಸೇರಿ) ಹಾಗೂ ಸಿ.ಟಿ.ಇ. ಪ್ರಾಂಶುಪಾಲರುಗಳಿಗೆ.
3. ಕಾರ್ಯದರ್ಶಿಗಳು/ಖಜಾಂಜಿಗಳು ರಾಜ್ಯ ಶಿಕ್ಷಣ ಕಲ್ಯಾಣ ನಿಧಿ, ಕೆ.ಜಿ. ರಸ್ತೆ ಬೆಂಗಳೂರು.
4. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲಾ ಉಪ ನಿರ್ದೇಶಕರು(ಆಡಳಿತ)
5. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲಾ ಉಪದೇಶಕರು(ಅಭಿವೃದ್ಧಿ)
6. ಉಪ ನಿರ್ದೇಶಕರು, ಅಲ್ಪಸಂಖ್ಯಾತ,ವಾಣಿಜ್ಯ, ಚಿತ್ರಕಲೆ ಮತ್ತು ಸಂಗೀತ, ಇವರ ಮಾಹಿತಿಗಾಗಿ.
7. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು.
8. ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ ಬೆಂಗಳೂರು,
9. ಉಪನಿರ್ದೇಶಕರು ಪ್ರಾಥಮಿಕ/ಪ್ರೌಢಶಿಕ್ಷಣ ಸಾ.ಶಿ.ಇ ಬೆಂಗಳೂರು,
10. ಕಛೇರಿ ಪ್ರತಿ,